ತಮ್ಮ ಅಮೆರಿಕಾದ ಕಾರ್ಯಯೋಜನೆಯ ಬಗ್ಗೆ ಸ್ವಾಮೀಜಿ ಅನೇಕ ಪತ್ರಗಳಲ್ಲಿ, ಬರಹಗಳಲ್ಲಿ ಮತ್ತು ಪ್ರವಚನಗಳಲ್ಲಿ ಉಲ್ಲೇಖಿಸಿದ್ದಾರೆ. ಇದರಿಂದ ನಮಗೆ ತಿಳಿದು ಬರುವುದು ಇಷ್ಟು: ಅವರ ಧಾರ್ಮಿಕ ಬೋಧನೆಯ ವಿಶ್ವವ್ಯಾಪಕ ಯೋಜನೆಯು ೧೮೯೩ರ ಕಡೆಯ ಭಾಗದಿಂದ ಹಿಡಿದು, ೧೮೯೪ರ ಬಹು ಭಾಗದವರೆಗೂ ಅವರಿಂದ ಕಾರ್ಯಗತವಾಗಿರಲಿಲ್ಲ. ೧೮೯೪ರ ಕಡೆಯ ಭಾಗದಿಂದ ಹಿಡಿದು, ೧೮೯೫ರ ಮೊದಲ ಭಾಗದ ಕಾಲಾವಧಿಯಲ್ಲಿ ಮಾತ್ರವೇ ಅವರ ವಿಶ್ವವ್ಯಾಪಿ ಸಂದೇಶದ ಸ್ವರೂಪವು ತನ್ನ ಪೂರ್ಣಪ್ರಮಾಣವನ್ನು ಪಡೆದುಕೊಂಡಿತು. ಈ ಹೊತ್ತಿಗಾಗಲೇ ಅವರು ಹೆಚ್ಚೇನೂ ಸಾರ್ವಜನಿಕ ಪ್ರವಚನಗಳನ್ನು ನೀಡುತ್ತಿರಲಿಲ್ಲ ; ಈಗಾಗಲೇ ಅಮೆರಿಕಾದಲ್ಲಿ ನೆಲೆಗೊಂಡು, ತಮ್ಮ ಜೀವಿತಕಾರ್ಯದ ಯೋಜನೆಯಲ್ಲಿ ತೊಡಗಿದ್ದರು.

ಸ್ವಾಮೀಜಿಯರ ಜೀವಿತಕಾರ್ಯದ ಮತ್ತೊಂದು ವಿವರಣೆಯನ್ನು ಸ್ವಾಮಿ ಕೃಪಾನಂದ (ಲೈನ್ ಲ್ಯಾಂಡ್ಸ್‌ಬರ್ಗ್) ಅವರ ಬರವಣಿಗೆಗಳಲ್ಲಿ ಕಾಣಬಹುದು. ಅವರು ಸ್ವಾಮಿ ವಿವೇಕಾನಂದರ ಮೊದಲ ಸಂನ್ಯಾಸಿ ಶಿಷ್ಯರು ಎಂದು ಪ್ರಸಿದ್ಧರಾಗಿದ್ದಾರೆ. ಅವರು 'ಬ್ರಹ್ಮವಾದಿನ್' ಪತ್ರಿಕೆಗೆ ತಾವು ಕಳುಹಿಸಿಕೊಟ್ಟ ವರದಿಯೊಂದರಲ್ಲಿ ಹೀಗೆ ಬರೆಯುತ್ತಾರೆ: ''ಸ್ವಾಮೀಜಿಯವರು ತಮ್ಮ ಮಹಾನ್ ಯೋಜನೆಯಾದ ವೇದಾಂತ ಪ್ರಸಾರಕ್ಕೆ ಮುಂಚೆ, ಅಮೆರಿಕಾದ ಜನಮಾನಸದಲ್ಲಿ ಮೂಡಿದ್ದ ಸಂಶಯಗಳು, ಪೂರ್ವಾಗ್ರಹಗಳು ಮತ್ತು ಸಂಕುಚಿತತೆಗಳನ್ನು ನಿವಾರಿಸಬೇಕಾಗಿತ್ತು. ಅತ್ಯಂತ ಧೈರ್ಯವಂತನೂ ಎದೆಗೆಡುತ್ತಿದ್ದ ಕಾರ್ಯವದು. ಅತ್ಯಂತ ಶಕ್ತಿಶಾಲಿ ಇಚ್ಛಾಶಕ್ತಿಯುಳ್ಳವನು ಕೂಡ ಮಾಡಲು ಹೆದರುತ್ತಿದ್ದ ಕೆಲಸ ಇದು. ಆದರೆ ಸ್ವಾಮೀಜಿ ಕಷ್ಟಗಳಿಗೆ ಎದೆಗುಂದುವವರಲ್ಲ. ಅವರಿಗೆ ಹಣದ ಬೆಂಬಲ ಇರಲಿಲ್ಲ ; ಪ್ರಭಾವಶಾಲಿ ಸ್ನೇಹಿತರೂ ಇರಲಿಲ್ಲ. ಕೇವಲ ಭಗವಂತನನ್ನು ಮಾತ್ರವೇ ಅವರು ನಂಬಿಕೊಂಡಿದ್ದರು. ಮಾನವತೆಯ ಮೇಲೆ ತಮಗಿದ್ದ ವಿಶ್ವಪ್ರೇಮ ಮಾತ್ರವೇ ಅವರಿಗೆ ಆಸರೆಯಾಗಿತ್ತು. ಇವುಗಳಿಂದ ಸನ್ನದ್ಧರಾಗಿ ಅವರು ಅತ್ಯಂತ ಸಹನೆಯಿಂದ ತಮ್ಮ ಕಾರ್ಯದಲ್ಲಿ ತೊಡಗಿದರು. ಸತ್ಯಾನ್ವೇಷಕರಾದ ಮಹಿಳೆಯರು ಮತ್ತು ಪುರುಷರೆಲ್ಲರ ಹೃದಯಗಳಿಗೆ ತಮ್ಮ ದಿವ್ಯಸಂದೇಶ ತಲುಪುವವರೆಗೂ ತಾನು ಕಾರ್ಯದಿಂದ ವಿಮುಖರಾಗುವುದಿಲ್ಲ ಎನ್ನುವ ದೃಢಸಂಕಲ್ಪವನ್ನು ಅವರು ಮಾಡಿದರು.

ಸ್ವಾಮಿ ವಿವೇಕಾನಂದರು ಮೊದಲ ಒಂದು ವರ್ಷ ಬಿಡುವಿಲ್ಲದ ಪ್ರವಚನಗಳಲ್ಲಿ ತೊಡಗಿದ್ದರು. ಈ ಪ್ರವಚನಗಳ ಉದ್ದೇಶ ಅವರು ಅಂದಿನ ಕಾಲದಲ್ಲಿ ಅಮೆರಿಕಾದ ಜನರಲ್ಲಿ ಮನೆಮಾಡಿದ್ದ ಧಾರ್ಮಿಕ ನಂಬಿಕೆಗಳಲ್ಲಿದ್ದ ತಪ್ಪು ಅಭಿಪ್ರಾಯಗಳನ್ನು ಕಳೆಯುವುದೇ ಆಗಿತ್ತು. ಆದರೆ ಹಲವರು ಅಭಿಪ್ರಾಯಪಡುವಂತೆ, ಮುಂದೆ ಪೂರ್ಣಪ್ರಮಾಣದಲ್ಲಿ ಅವರು ಬೋಧಿಸಲಿರುವ ವೇದಾಂತ ಸಂದೇಶಕ್ಕೆ ಅಮೆರಿಕಾದ ಜನತೆಯ ಮನಸ್ಸನ್ನು ಸಿದ್ಧಗೊಳಿಸುವುದಂತೂ ಖಂಡಿತ ಆಗಿರಲಿಲ್ಲ. ಈ ಕಾರ್ಯವನ್ನು ಸಾಧಿಸುವಷ್ಟು ಕಾಲ ಅಮೆರಿಕಾದಲ್ಲಿ ವಾಸ್ತವ್ಯ ಹೂಡುವ ಬಯಕೆಯೂ ಅವರಿಗೆ ಇರಲಿಲ್ಲ. ಅವರು ೧೮೯೪ರ ಮೊದಲ ಭಾಗದಲ್ಲಿ ಬರೆದ ಪತ್ರಗಳಲ್ಲಿ ಇದು ಸ್ಪಷ್ಟವಾಗಿ ಗೋಚರವಾಗುತ್ತದೆ. ಅಮೆರಿಕಾದಲ್ಲಿ ಬಹುಕಾಲ ನೆಲೆಸುವ ಬಗ್ಗೆ ಅವರು ೧೮೯೪ರ ಕಡೆಯ ಭಾಗದ ತನಕವಂತೂ ಯಾವ ನಿಶ್ಚಯಕ್ಕೂ ಬಂದಿರಲಿಲ್ಲ. ಆ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಅವರು ಅಳಸಿಂಗ ಪೆರುಮಾಳ್ ಅವರಿಗೆ ಹೀಗೆ ಬರೆಯುತ್ತಾರೆ: ''ನಾನು ಭಾರತಕ್ಕೆ ಬಹಳ ಬೇಗ ಹಿಂದಿರುಗಿ ಬರುವೆನೆಂದು ಆಶಿಸುತ್ತೇನೆ. ನನಗೆ ಈ ದೇಶದ ವಾಸ್ತವ್ಯ ಸಾಕಾಗಿದೆ.''

ಅಂತಿಮವಾಗಿ ಹೇಳಬೇಕಾದರೆ, ಸ್ವಾಮಿ ವಿವೇಕಾನಂದರು ೧೮೯೩ ಮತ್ತು ೧೮೯೪ರ ಬಹುಭಾಗ ಅಮೆರಿಕಾದಲ್ಲಿ ನಡೆಸಿದ ಚಟುವಟಿಕೆಗಳಲ್ಲಿ ಮೂರು ಉದ್ದೇಶಗಳನ್ನು ನಾವು ಕಂಡುಕೊಳ್ಳಬಹುದು: ೧. ಭಾರತದಲ್ಲಿನ ತಮ್ಮ ಕಾರ್ಯಕ್ಕಾಗಿ ಹಣ ಸಂಗ್ರಹಣೆಯನ್ನು ಮಾಡುವುದು ಮತ್ತು ಅದೇ ಸಮಯದಲ್ಲಿ ಅಮೆರಿಕಾದಲ್ಲಿನ ತಮ್ಮ ವಾಸ್ತವ್ಯದ ಖರ್ಚುವೆಚ್ಚಗಳನ್ನು ಸರಿದೂಗಿಸಿಕೊಳ್ಳುವುದು. ೨. ಅಮೆರಿಕದ ಜನತೆಗೆ ಹಿಂದೂಧರ್ಮದ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸುವುದು ಮತ್ತು ಕ್ರೈಸ್ತ ಮಿಷನರಿಗಳು ಭಾರತದ ಬಗ್ಗೆ ಮಾಡುತ್ತಿದ್ದ ಅಪಪ್ರಚಾರವನ್ನು ತಡೆಹಿಡಿಯುವುದು. ಅದಕ್ಕಾಗಿ ಭಾರತದ ಸ್ಥಿತಿಗತಿಗಳ ಬಗ್ಗೆ ಸತ್ಯಾಂಶವನ್ನು ಅಮೇರಿಕದ ಜನತೆಗೆ ಒದಗಿಸುವುದು. ಇದನ್ನು ಸಮರ್ಪಕವಾಗಿ ಕೈಗೊಳ್ಳಲೆಂದೇ ಸ್ವಾಮೀಜಿ ಲೆಕ್ಚರ್ ಬ್ಯೂರೋವಿನ ಸಹಾಯವನ್ನು ಪಡೆದುಕೊಂಡರೇ ಹೊರತು, ಪಾಶ್ಚಾತ್ಯ ಜಗತ್ತಿನಲ್ಲಿ ವೇದಾಂತವನ್ನು ಬೋಧಿಸುವ ಸಮರ್ಥ ಮಾಧ್ಯಮವಾಗಿ ಅಲ್ಲ.

*(ಮುಂದುವರಿಯುವುದು)*


**ಯಃ ಸತತಂ ಪರಿಪೃಚ್ಛತಿ**
**ಶೃಣೋತಿ ಸಂಧಾರಯತ್ಯನಿಶಂ ।**
**ತಸ್ಯ ದಿವಾಕರಕಿರಣೈ-**
**ರ್ನಲಿನೀವ ವಿವರ್ಧತೇ ಬುದ್ಧಿಃ ॥**


— ಪಂಚತಂತ್ರ


'ಯಾರು ಯಾವಾಗಲೂ ಪ್ರಶ್ನೆ ಮಾಡುತ್ತಾನೋ, ಕಿವಿಗೊಟ್ಟು ಕೇಳುತ್ತಾನೋ, ಮತ್ತು ಯಾವಾಗಲೂ ಚೆನ್ನಾಗಿ ಮನದಟ್ಟು ಮಾಡಿಕೊಳ್ಳುತ್ತಾನೋ ಅವನ ಬುದ್ಧಿಯು ಸೂರ್ಯಕಿರಣಗಳಿಂದ ತಾವರೆಯು ಹೇಗೋ ಹಾಗೆ ಬೆಳೆಯುತ್ತದೆ.'

# ರಾಜಾ ಅಂಬರೀಷ

ಕಥೆ: ಮಧು      ಚಿತ್ರ: ಲತಾ




6
ವಿಷ್ಣುಚಕ್ರ ಪ್ರಕಟವಾಯಿತು. ಅದು ರಾಕ್ಷಸನನ್ನು ಸಂಹಾರ ಮಾಡಿ ನಂತರ ದುರ್ವಾಸನನ್ನು ಅಟ್ಟಿಸಿಕೊಂಡು ಹೋಯಿತು.
ಭಯಭೀತನಾದ ದುರ್ವಾಸ ಒಂದು ಸ್ಥಳದಿಂದ, ಮತ್ತೊಂದೆಡೆ ಓಡಲು ಪ್ರಾರಂಭಿಸಿದ. ಅವನು ಬ್ರಹ್ಮಲೋಕ, ಶಿವಲೋಕ ಮತ್ತು ಇಂದ್ರಲೋಕಕ್ಕೆ ಹೋದ. ತನ್ನನ್ನು ರಕ್ಷಿಸುವಂತೆ ಪ್ರತಿ ಯೊಬ್ಬ ದೇವತೆಯನ್ನೂ ಬೇಡಿಕೊಂಡ.
7
8
9
ಈ ವಿಷಯದಲ್ಲಿ ನಾವು ಅಸಮರ್ಥರು.
ಕೊನೆಗೆ ವಿಷ್ಣುಲೋಕಕ್ಕೆ ಹೋಗಿ ಭಗವಾನ್ ವಿಷ್ಣುವಿನಲ್ಲಿ ಶರಣು ಪಡೆದ.
10
ಹೇ ಪ್ರಭು! ಈ ಚಕ್ರದಿಂದ ನನ್ನನ್ನು ರಕ್ಷಿಸು.
11
ಋಷಿಗಳೆ! ನಾನು ಭಕ್ತ ಪರಾಧೀನ. ಆದ್ದರಿಂದ ನಾನು ನಿನಗೆ ಸಹಾಯ ಮಾಡಲಾರೆ.
12
ನಾನೂ ನಿನ್ನ ಭಕ್ತ. ನೀನು ಹೇಗೆ ಅಂಬರೀಷನಿಗೆ ಪಕ್ಷಪಾತಿಯಾಗಬಲ್ಲೆ?